ಮಾನ್ಯ ಹಿರಿಯ ಸದಸ್ಯರು ಹಾಗೂ ಮಾನ್ಯ ಸಚಿವರಾದ ಶ್ರೀ ಕೆ. ಹೆಚ್. ಪಾಟೀಲ್‌ರವರು ನಾನು ಮಾತನಾಡುವುದಕ್ಕೆ ಎದ್ದು ನಿಂತ ಕೂಡಲೇ ನಾನು ಏನು ಮಾತನಾಡುತ್ತೇನೆ ಎಂಬುದನ್ನು ಊಹಿಸಿ ಹೀಗೆ ಹೇಳಿದರೆ ಹೇಗೆ? ನಮ್ಮಂಥ ಕಿರಿಯ ಸದಸ್ಯರ ಗತಿ ಏನು ಸ್ವಾಮಿ? ಮಾನ್ಯ ವೆಂಕಟೇಶ್‌ರವರು ತಮ್ಮ ಅಪ್ಪಣೆ ಇಲ್ಲದೇ ಎದ್ದು ನಿಂತಾಗ ತಾವುಗಳು ಸಹಾನುಭೂತಿಯಿಂದ ಕಾಣಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ತಾವುಗಳು ಹೇಳಿದ ವಿಚಾರಗಳನ್ನು ನಾನು ಗಮನಿಸಿದ್ದೇನೆ. ಮಾನ್ಯ ವೆಂಕಟೇಶ್‌ರವರು ಹೊಸ ಸದಸ್ಯರು ಮತ್ತು ಬಿಸಿರಕ್ತದ ಯುವಕರು. ಅವರ ತಂದೆಯವರು ನನ್ನ ಪರಿಚಯದವರು ನನ್ನ ಜೊತೆಯಲ್ಲಿ ಈ ಸದನದಲ್ಲಿ ಇದ್ದವರು, ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ ನಾನು ಅವರ ತಂದೆಯವರನ್ನು ಇಲ್ಲಿ ಡೆಪ್ಯುಟಿ ಸ್ಪೀಕರ್ ಆಗಬೇಕೆಂದು ಸೂಚಿಸಿದ್ದವರ ಪೈಕಿಯಲ್ಲಿ ಒಬ್ಬನು. ನನಗೆ ಅವರ ಮೇಲೆ ಅಭಿಮಾನ ಇದೆ. ಆ ಒಂದು ಸಲಿಗೆ ಇಂದ ಅವರ ತಂದೆಯವರ ಹತ್ತಿರ ಪಾರ್ಲಿಮೆಂಟರಿ ನೀತಿನಿಯಮಗಳ ಬಗ್ಗೆ ತಿಳಿದುಕೊಂಡು ಪರ್ತಿಸಿರಿ ಎಂದು ಹೇಳುತ್ತಿದ್ದೇನೆ.

ಮಾನ್ಯ ಸಚಿವ ಶಿವಣ್ಣನವರು ಸಲ್ಲಿಸಿದ ಪತ್ರವನ್ನು ಸದನದ ಗಮನಕ್ಕೆ ತರುತ್ತೇನೆ.

(ಲಿಖಿತ ಪತ್ರವನ್ನು ಸನ್ಮಾನ್ಯ ಅಧ್ಯಕ್ಷರು ಓದಿದರು)

ಪ್ರಕಟಣೆ

ಶ್ರೀ ಬಿ. ಶಿವಣ್ಣ — ಸಮಾಜ ಕಲ್ಯಾಣ ಮಂತ್ರಿಗಳು, ಇವರ ಪತ್ರ.

ಮಾನ್ಯ ಅಧ್ಯಕ್ಷರೆ.

ನಾನು ದಿನಾಂಕ ೧೯-೬-೯೦ರಿಂದ ೧೪-೭-೯೦ರವರೆಗೆ ಸರ್ಕಾರಿ ಕೆಲಸದ ನಿಮಿತ್ತ ವಿದೇಶಿ ಪ್ರವಾಸ ಕೈಗೊಳ್ಳಲಿದ್ದೇನೆ. ನನ್ನ ಖಾತೆಗೆ ಸಂಬಂಧಪಟ್ಟ ವಿಷಯಗಳನ್ನು ಹಾಗೂ ಪ್ರಶ್ನೆಗಳನ್ನು ವಿಧಾನ ಸಭೆಯಲ್ಲಿ ಪ್ರಸ್ತಾಪಿಸಲ್ಪಡುವ ಎಲ್ಲಾ ವಿಷಯಗಳನ್ನು ಶ್ರೀ ಎಂ. ವೀರಪ್ಪ ಮೊಯಿಲಿ, ಯೋಜನೆ ಕಾನೂನು, ಸಂಸದೀಯ ವ್ಯವಹಾರಗಳು ಹಾಗು ಪ್ರವಾಸೋದ್ಯಮ ಸಚಿವರು ನನ್ನ ಗೈರುಹಾಜರಿಯಲ್ಲಿ ನೋಡಿಕೊಳ್ಳುವರು ಮತ್ತು ಉತ್ತರಿಸುವರು. ಈಗ ಐದುಕಾಲು ಗಂಟೆಯಾಗಿದೆ. ಇಂದಿನ ಕಲಾಪಗಳನ್ನು ಮುಗಿಸೋಣವೇ ಅಥವಾ ಬೇರೆ ಕಲಾಪಗಳನ್ನು ತೆಗೆದುಕೊಳ್ಳೋಣವೆ?

ಶ್ರೀ ಕೆ. ಹೆಚ್. ಪಾಟೀಲ್. - ಬೇಡಿಕೆಯನ್ನು ಮಂಡಿಸಿ ಚರ್ಚೆ ಪ್ರಾರಂಭ ಮಾಡೋಣ.

ಅಧ್ಯಕ್ಷರು.—ಮಂಡನೆ ಆದಮೇಲೆ there cannot be a vaccum, Somebody should take over the floor.

ಶ್ರೀ ಕೆ. ಹೆಚ್. ರಂಗನಾಥ್.—ಮಂಡಿಸಿದ ಮೇಲೆ ವಿರೋಧ ಪಕ್ಷದವರು ಒಬ್ಬಿಬ್ಬರು ಮಾತನಾಡಲಿ. ಇಲ್ಲದೇ ಹೋದರೆ ಆಫೊಷ್ಟಿನ ಕಾರ್ಯಕಲಾಪಗಳ ಪಟ್ಟಿಯಲ್ಲಿ ನಾವು ಪೂರ್ಣ ಕೆಲಸ ಮಾಡಿದ ಹಾಗೆ ಆಗುವುದಿಲ್ಲ. ಮಾನ್ಯ ಸಚಿವರು ಮಂಡನೆ ಮಾಡಿದ ಮೇಲೆ ಒಂದು ಗಂಟೆಯ ಕಾಲ ಚರ್ಚೆ ಮಾಡಬಹುದು ಎಂದು ನನ್ನ ಅಭಿಪ್ರಾಯ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಕಾರ್ಮಿಕ ಇಲಾಖೆಯ ಬಗ್ಗೆ ಚರ್ಚೆಯನ್ನು ನಾನು ಪ್ರಾರಂಭ ಮಾಡುವುದು. ಈಗ ಸಮಯ ಆಗಿದೆ. ಮಾನ್ಯ ಸಚಿವರು ಮಂಡನೆ ಮಾಡಲಿ ಚರ್ಚೆಯನ್ನು ನಾಳೆ ಪ್ರಾರಂಭ ಮಾಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ —ಬೇರೆ ವಿಷಯಗಳು ಇಲ್ಲದಿದ್ದರೆ, ಸಮಯಾವಕಾಶ ಇದ್ದರೆ ನಾನು ನಿಯಮ ೬೮ರ ಕೆಳಗೆ ಒಂದು ವಿಷಯವನ್ನು ಪ್ರಸ್ತಾಪಿಸಲು ಕೊಟ್ಟಿದ್ದೇನೆ. ನನಗೆ ಅವಕಾಶ ಕೊಡಿ.

ಅಧ್ಯಕ್ಷರು.—ನಾಳೆ ಅದರ ಬಗ್ಗೆ ರೂಲಿಂಗ್ ಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಏನೋ ರೆಡಿ ಇದ್ದೇನೆ. ದಯವಿಟ್ಟು ತಾವು ಅವಕಾಶ ಮಾಡಿಕೊಟ್ಟರೆ ಒಳ್ಳೆಯದು,

ಅಧ್ಯಕ್ಷರು.—ಈಗ ಬೇಡಿಕೆಗಳು.